ಸಿಸಿ ನಂ. 194/2022 ಪಿಡಬ್ಲೂ :1

ದಿನಾಂಕಃ 30-03-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀ ಆರ್ ಜಿ ಎನ್ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತದೆ.

2. ಫಿರ್ಯಾದುದಾರ ಸಂಸ್ಥೆಯವರು ನನಗೆ ನೀಡಿದ ಅಧಿಕಾರ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಆರೋಪಿಯು ನೀಡಿದ ಚೆಕ್ ಹಾಜರು ಪಡಿಸಿದ್ದು ಅದನ್ನು ನಿಪಿ -2 ಎಂದು ಗುರುತಿಸಲಾಯಿತು . ನಿಪಿ-2 ರಲ್ಲಿರುವ ಸಹಿ ಆರೋಪಿಯ ಸಹಿಯಾಗಿರುತ್ತದೆ . ಸದರಿ ಸಹಿಯನ್ನು ನಿಪಿ -2 ಎ ಎಂದು ಗುರುತಿಸಲಾಯಿತು. ಬ್ಯಾಂಕನವರು ಕೊಟ್ಟಿರುವ ಮೆಮೊವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ -3 ಎಂದು ಗುರುತಿಸಲಾಯಿತು. ನಾವು ನಮ್ಮ ವಕೀಲರ ಮುಖಾಂತರ ಆರೋಪಿಗೆ ನೀಡಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-4 ಎಂದು, ಅಂಚೆ ರಸೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಆರೋಪಿಗೆ ಕಳುಹಿಸಿರುವ ನೋಟಿಸನ್ನು ಅವರು ಸ್ವೀಕರಿಸದ ಕಾರಣ ವಾಪಸ್ಸು ಬಂದಿದ್ದು ಅದನ್ನು ಅಂಚೆ ಲಕೋಟೆ ಸಮೇತವಾಗಿ ಹಾಜರು ಪಡಿಸಿರುತ್ತೇವೆ . ಸದರಿ ಅಂಚೆ ಲಕೋಟೆಯನ್ನು ನಿಪಿ -6 ಎಂದು, ಅದರ ಒಳಗಿದ್ದ ನೋಟಿಸನ್ನು ನಿಪಿ -7 ಎಂದು ಗುರುತಿಸಲಾಯಿತು. ಆರೋಪಿಯು ಕೊಟ್ಟಿರುವ ಸಾಲದ ಅರ್ಜಿಯ ಯಥಾ ನಕಲನ್ನು ಹಾಜರು ಪಡಿಸಿರುತ್ತೇನೆ . ಸದರಿ ಸಾಲದ ಅರ್ಜಿಯ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ಸಾಲದ ಅರ್ಜಿಯ ಯಥಾ ನಕಲನ್ನು ನಿಪಿ-8 ಎಂದು ಗುರುತಿಸಲಾಯಿತು .

ಪಿಡಬ್ಲ್ಯೂ 1

ವೈಯಕ್ತಿಕ ಸಾಲದ ಕರಾರು ಪತ್ರದ ಯಥಾ ನಕಲನ್ನು ಹಾಜರು ಪಡಿಸಿರುತ್ತೇನೆ . ಸದರಿ ಸಾಲದ ಕರಾರು ಪತ್ರದ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ಸಾಲದ ಕರಾರು ಪತ್ರದ ಯಥಾ ನಕಲನ್ನು ನಿಪಿ -9 ಎಂದು ಗುರುತಿಸಲಾಯಿತು . ಡಿಮಾಂಡ್ ಪ್ರಾಮಿಸರಿ ನೋಟಿನ ಯಥಾ ನಕಲನ್ನು ಹಾಜರು ಪಡಿಸಿರುತ್ತೇನೆ . ಸದರಿ ಡಿಮಾಂಡ್ ಪ್ರಾಮಿಸರಿ ನೋಟಿನ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ಡಿಮಾಂಡ್ ಪ್ರಾಮಿಸರಿ ನೋಟಿನ ಯಥಾ ನಕಲನ್ನು ನಿಪಿ -10 ಎಂದು ಗುರುತಿಸಲಾಯಿತು . ಜಾಮೀನುದಾರರು ಬರೆದುಕೊಟ್ಟಿರುವ ಭದ್ರತಾ ಪತ್ರದ ಯಥಾ ನಕಲನ್ನು ಹಾಜರು ಪಡಿಸಿರುತ್ತೇನೆ . ಸದರಿ ಭದ್ರತಾ ಪತ್ರದ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ಭದ್ರತಾ ಪತ್ರದ ಯಥಾ ನಕಲನ್ನು ನಿಪಿ -11 ಎಂದು ಗುರುತಿಸಲಾಯಿತು . ಆರೋಪಿಗೆ ಸಾಲ ಕೊಟ್ಟಿರುವ ಬಗ್ಗೆ ಅವರು ಕೊಟ್ಟಿರುವ ರಸೀದಿಯ ಯಥಾ ನಕಲನ್ನು ಹಾಜರು ಪಡಿಸಿರುತ್ತೇನೆ . ಸದರಿ ರಸೀದಿಯ ಮೂಲ ಪ್ರತಿಯನ್ನು ಪರಿಶೀಲಿಸಿ ಸಾಕ್ಷಿಗೆ ವಾಪಸ್ಸು ನೀಡಲಾಯಿತು . ಸದರಿ ರಸೀದಿಯ ಯಥಾ ನಕಲನ್ನು ನಿಪಿ-12 ಎಂದು ಗುರುತಿಸಲಾಯಿತು . ನಿಪಿ-12 ನ್ನು ಸಾಕ್ಷಿಯು ಸಾಲ ಮಂಜೂರು ಪತ್ರ ಎಂದು ಹೇಳಿದ್ದು, ನಂತರ ಅದನ್ನು ಪಾಮಿಸರಿ ನೋಟ್ ಎಂದು ಹೇಳಿರುತ್ತಾರೆ .

( ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.